**ಪಾಠ -5**

# ದೋಷ ಪರಿಹಾರ ಪ್ರಕಟಿಸಲಾಯಿತು.

**(ಆದಿಕಾಂಡ 3 ಮತ್ತು 22, ಹಾಗೂ ವಿ.ಕಾ. 32)**

**(ದೋಷಪರಿಹಾರ ಮತ್ತು ಕ್ರಿಸ್ತನ ಶಿಲುಬೆ)**

**ಮೂಲ** : ಬ್ರೂಸ್ ಎನ್ ಕ್ಯಾಮರಾನ್ ಜೆ.ಡಿ. **ಅನುವಾದ** : ಪಾಸ್ಟರ್ ಚೆಲುವರಾಜು

**ಪೀಠಿಕೆ:** ಮಾನವರು ನಿಮ್ಮನ್ನು ತಿರಸ್ಕರಿಸಿದಾಗ ಏನು ಮಾಡುತ್ತಿದ್ದೀರಿ? ಎರಡು ವಾರಗಳ ಹಿಂದೆ, ಹೇಗೆ ಆದಾಮ ಮತ್ತು ಹವ್ವಳ ಪಾಪಮಾಡಿದರು ಮತ್ತು ನಮ್ಮೆಲ್ಲರನ್ನು ಪಾಪದ ಕೂಪಕ್ಕೆ ನೂಕಿದರು ಎಂಬುದನ್ನು ಕಲಿತೆವು. ಕಳೆದ ವಾರ ದೇವರು ನಮ್ಮನ್ನು ರಕ್ಷಿಸಲು ಹಾಕಿದ ರಕ್ಷಣೆಯ ಯೋಜನೆಯನ್ನು ಕುರಿತು ಓದಿದೆವು. ಈ ವಾರ ನಮ್ಮ ವಿಪತ್ತಿನ ಪರಿಹಾರಕ್ಕೆ ದೇವರು ಯೋಜಿಸಿದ ಯೋಜನೆಯ ಪ್ರಕಟಣೆಯನ್ನು ಕುರಿತು ಕಲಿಯೋಣ. ದೇವರಿಗೆ ಇಂಥಹ ತೀರ್ಮಾನ ತೆಗೆದುಕೊಳ್ಳುವುದು ಎಷ್ಟು ಕಷ್ಟವಾಗಿರಬಹುದು? ದೇವರು ತಮ್ಮ ಮನಸ್ಸಿನಲ್ಲಿ ಅಂದುಕೊಂಡಿದ್ದನ್ನು ಮೊದಲೇ ಏಕೆ ಪ್ರಕಟಪಡಿಸಿದರು? ಅವರ ಮಾರ್ಗಗಳನ್ನು ತೆರೆದಿಡಲಿಲ್ಲವೇಕೆ? ದೇವರ ಗುಣಸ್ವಭಾವಗಳನ್ನು ಕುರಿತು ಈ ಘಟನಾವಳಿಗಳು ನಮಗೆ ತಿಳಿಸಿಕೊಡುವುದೇನು? ಈ ವಿಷಯಗಳನ್ನು ಕುರಿತು ಕೂಡ ಆಳವಾಗಿ ಅಧ್ಯಯನ ಮಾಡೋಣವೇ?

## I. ವಾಗ್ದಾನ :

(ಅ) ಆದಾಮ ಮತ್ತು ಹವ್ವಳ ಕಥೆಯ ಮುಂದಿನ ಭಾಗವನ್ನು ನೋಡೋಣ. ಆ.ಕಾ. 3:8ನ್ನು ಓದಿರಿ. ಆದಾಮ ಮತ್ತು ಹವ್ವಳ ಅವಿತುಕೊಂಡದ್ದು ಏಕೆ? [ಈ ವರ್ತನೆ ಅಪರಾಧಿ ಮನೋಭಾವವನ್ನು ತೋರಿಸುತ್ತದೆ. ಕೆಟ್ಟತನ ಎಂದರೆ ಏನು ಎಂಬುದು ಈಗ ಅವರ ಅರಿವಿಗೆ ಬಂದಿದೆ.]

(ಆ) **ಆದಿಕಾಂಡ 3:9-10**ನ್ನು ಓದಿಕೊಳ್ಳಿ. ಇದೊಂದು ಪ್ರಾಮಾಣಿಕ ಉತ್ತರವಾಗಿದೆಯೇ? [ಇಲ್ಲ ಆ.ಕಾ. 3:7 ಅವರು ಬೆತ್ತಲೆಯಾಗಿರಲಿಲ್ಲವೆಂದು ಮೊದಲೇ ಹೇಳಿದೆ. ಎರಡನೇಯದಾಗಿ ಅವರು ಅವಿತುಕೊಂಡದಕ್ಕೆ ಕಾರಣ:ಅವರ ಪಾಪಪ್ರಜ್ಞೆ]

(ಇ) **ಆದಿಕಾಂಡ 3:11-12**ನ್ನು ಓದಿಕೊಳ್ಳಿರಿ. ಅವರ ತಪ್ಪೋಪ್ಪಿಗೆ ಬಗ್ಗೆ ನಿವೇನು ಹೇಳುತ್ತೀರಿ? ನೀವು ದೇವರಾಗಿದ್ದರೆ ಯಾವ ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದಿರಿ? [ಆದಾಮ ತನ್ನ ಪಾಪಕ್ಕೆ, ದೇವರು ಮತ್ತು ಹವ್ವಳನ್ನು ದೂರಿದ್ದಾನೆ]

(ಈ) **ಆದಿಕಾಂಡ 3:13**ನ್ನು ಓದಿಕೊಳ್ಳಿ. ಹವ್ವಳ ತಪ್ಪೋಪ್ಪಿಗೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು? [ಇದು ಆದಾಮನ ಉತ್ತರಕ್ಕಿಂತ, ಉತ್ತಮವಾದ ಉತ್ತರವಾಗಿದೆ. ಆದರೆ ಆಕೆಯೂ ಮತ್ತೊಂದನ್ನು ದೂರುತ್ತಿದ್ದಾಳೆ (ಸರ್ಪ) ಮತ್ತು ಅಪರೋಕ್ಷವಾಗಿ ದೇವರನ್ನು ದೂರಿದ್ದಾಳೆ.

ಆದರೆ, ತಾನು ಮೋಸಹೋಗಿದ್ದನ್ನು ಹೇಳಿಕೊಂಡಿದ್ದಾಳೆ ಮತ್ತು ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾಳೆ.]

(ಉ) ಒಂದು ಹೆಜ್ಜೆ ಹಿಂದೆಹಾಕಿ. ನಿಮ್ಮನ್ನು ದೇವರ ಸ್ಥಾನದಲ್ಲಿ ಕಲ್ಪಿಸಿಕೊಳ್ಳಿ. ಹವ್ವಳ ಈ ಹಿಂದೆ ಸೈತಾನನೇ ಸರಿ ಎಂಬ ತೀರ್ಮಾನಕ್ಕೆ ಬಂದಿದ್ದಾಳೆ. ಅಂದರೆ : ದೇವರು ನನಗೆ ಸುಳ್ಳು ಹೇಳಿದ್ದಾರೆ ಮತ್ತು ಆತ ನಂಬಲರ್ಹ ವ್ಯಕ್ತಿಯಲ್ಲ. ಇಂಥಹ ಹಿನ್ನಲೆಯಲ್ಲಿ, ಈಗ ನಾವು ಓದಿದ ಸಂವಾದದಲ್ಲಿ ದೇವರು ಅವಳೊಂದಿಗೆ ಯಾವ ರೀತಿಯಾಗಿ ಪ್ರತಿಕ್ರಿಯೆ ಮಾಡಬೇಕಿತ್ತು. [ನಾನು ದೇವಾರಾಗಿದ್ದರೆ ಮಹಾರೌದ್ರನಾಗುತ್ತಿದ್ದೆ. ನನ್ನ ಸೃಷ್ಟಿ ನನ್ನನ್ನು ಸುಳ್ಳುಗಾರ ಎಂದಿತಲ್ಲ. ನಾನು ಅವರೊಂದಿಗೆ ಸಲವಾದ ಮಾಡಿದಾಗ ಅವರು ತಮ್ಮ ಸುಳ್ಳನ್ನೇ ಮುಂದುವರಿಸಿದರಲ್ಲ. (ಆದಾಮ ಸಹ ಹಾಗೆ ನಡೆದುಕೊಂಡ) ಅವರ ಪಾಪಕ್ಕೆ ನನ್ನನ್ನು ದೂಷಿಸಿದರಲ್ಲ.]

(i) ಇಂಥಹವರಿಗಾಗಿ ಯಾತನಾಮಯವಾಗಿ ಮರಣಿಸುವದಕ್ಕೆ ನೀವು ಸಿದ್ಧರಾಗುತ್ತಿದ್ದೀರಾ? ಅಥವಾ ಇಂಥಹವರನ್ನು ಆಗಿಂದಾಗಲೇ ನಾಶಮಾಡಿ ಇನ್ನಿಲ್ಲದಂತೆ ಮಾಡುವುದೇ ಬಹುಶಃ ಸರಿಯಾದ ತೀರ್ಮಾನವಲ್ಲವೇ? ಏಕೆಂದರೆ ಇದಕ್ಕೆ ಮುನ್ನ ನಾನು ಅವರಿಗೆ ಎಚ್ಚರಿಕೆ ನೀಡಿದ್ದೆ. ಆದರೂ ಅವರು ಅದನ್ನು ಮೀರಿ ಹೀಗೆ ನಡೆದುಕೊಂಡರು.

(ಊ) **ಆದಿಕಾಂಡ 3:14–15**ನ್ನು ಓದಿಕೊಳ್ಳಿರಿ. ಸ್ತ್ರೀಯಳ "ಸಂತತಿಗೆ" ದೇವರ ವಾಗ್ದಾನವೇನು? [ದೇವರು ಮಾನವಾವತರದಲ್ಲಿ ಬರುವ ವಾಗ್ದಾನವಿದು: ಯೇಸುಸ್ವಾಮಿ ಸ್ತ್ರೀಯರಲ್ಲಿ (ಮರಿಯಳಿಗೆ) ಮಗನಾಗಿ, ಪರಲೋಕ ಬಿಟ್ಟು ಭೂಲೋಕದಲ್ಲಿ ಜನಿಸುವ ವಾಗ್ದಾನವಿತ್ತು. ಯೇಸುಸ್ವಾಮಿ ಸೈತಾನನ್ನು ನಾಶಮಾಡುತ್ತಾರೆ ("ತಲೆಯನ್ನು ಜಜ್ಜುವದು") ಮತ್ತು ಸೈತಾನ, ಯೇಸುಸ್ವಾಮಿ ನೋವನ್ನುಂಟುಮಾಡುವನು ("ಹಿಮ್ಮಡಿಯನ್ನು ಕಚ್ಚುವ") ಜನ.]

## II. ದೇವರ ನೋವನ್ನು ಅನುಭವಿಸುವಿಕೆ

(ಅ) **ಆದಿಕಾಂಡ 22:1–2**ನ್ನು ಓದಿಕೊಳ್ಳಿ. ಅಬ್ರಹಾಮನ ಸ್ಥಾನದಲ್ಲಿ ನಿಮ್ಮನ್ನು ಕಲ್ಪನೆ ಮಾಡಿಕೊಳ್ಳಿ. ದೇವರು ನಿಮ್ಮ ಮಗನನ್ನು ಮೊದಲು ಕೊಂದು ನಂತರ ಆತನನ್ನು ಸುಡಲು ಹೇಳಿದ್ದಾರೆ. ದೇವರಿಂದ ಬಂದ ಈ ಆಜ್ಞೆಯನ್ನು ಉಲ್ಲಂಘಿಸಲು ನಿಮಗಿರುವ ಕಾರಣಗಳಾವುವು?

1. ಈ ವಚನಗಳಲ್ಲಿ ದೇವರು ಇಸಾಕನನ್ನು ಹೇಗೆ ವರ್ಣಿಸಿದ್ದಾರೆಂದು ಗಮನಿಸಿರಿ. ಅಬ್ರಹಾಮ ದೇವರ ಆಜ್ಞೆಗೆ ವಿಧೆಯನಾಗಿರಲು ಪ್ರಯತ್ನಿಸುವಾಗ ಈ ಕಾರ್ಯ ಆತನ ವ್ಯತಿರಿಕ್ತಗಳನ್ನು ಬಹುಶಃ ಇನ್ನೂ ಹೆಚ್ಚಾಗಿಸುತ್ತಿದ್ದವೇ? [ದೇವರು, ಇಸಾಕನನ್ನು ಕುರಿತು "ಒಬ್ಬನೇ ಮಗ" ಮತ್ತು "ಪ್ರಿಯನಾದ ಮಗ" ಎಂದೆಲ್ಲಾ ಒತ್ತಿ ಹೇಳಿರುವುದನ್ನೂ

ಗಮನಿಸಿ. ಇಂಥಹ ಮಾತುಗಳು ಮಾಡಬೇಕಾದ ಕಾರ್ಯಕ್ಕೆ ಇನ್ನೂ ಹೆಚ್ಚಿನ ತಡೆಬರುವಂತಿದೆ?]

2. **ಯಾಜಕಕಾಂಡ 20:1-2** ಮತ್ತು **ಯೆರೆಮಿಯ 32:35**ನ್ನು ಓದಿಕೊಳ್ಳಿ. ಮಕ್ಕಳನ್ನು ಆಹುತಿ ಕೊಡುವ ವಿಷಯದಲ್ಲಿ ದೇವರ ಮನೋಭಿಪ್ರಾಯವೇನು?

(i) ಅಬ್ರಹಾಮನ ವಿಷಯದಲ್ಲಿ ದೇವರು ತಮ್ಮ ಮನಸ್ಸಿಗೆ ವಿರುದ್ಧವಾದ ಕಾರ್ಯವನ್ನು ಮಾಡಲು ಹೇಳಿದ್ದು ಏಕೆ? ಈ ವಿಷಯದಲ್ಲಿ ದೇವರು, "ಅದರ ಸಂಕಲ್ಪವೂ ನನ್ನ ಮನಸ್ಸಿನಲ್ಲಿ ಹುಟ್ಟಲಿಲ್ಲ" ಎಂದಿದ್ದಾರಲ್ಲವೇ?

3. **ಆದಿಕಾರಂಡ 21:12**ನ್ನು ಓದಿಕೊಳ್ಳಿರಿ. ಇಸಾಕನ ಭವಿಷ್ಯವನ್ನು ಕುರಿತು ದೇವರು ಹೇಳಿದ್ದೇನು?

(i) ನೀವು ಅಬ್ರಹಾಮ್ ಆಗಿದಿದ್ದರೆ, ಈ ವಾಕ್ಯ ನಿಮ್ಮ ಮನಸ್ಸಿನ ಮೇಲೆ ಯಾವ ಅಭಿಪ್ರಾಯ ಬೀರುತ್ತಿತ್ತು? [ನನ್ನ ಚೊಚ್ಚಲ ಮಗ, ಇಸ್ಮಾಯೇಲ, ಕಿಶೋರನಾಗಿದ್ದಾಗದೇವರು ಆತನನ್ನು ಕಳುಹಿಸಿಬಿಟ್ಟಾರು. ಅದು ಹಾಗೆ ಆಗುವುದು ನನಗೆ ಬೇಕಾಗಿರಲಿಲ್ಲ. ಅದನ್ನು ನಾನು ನಿರೀಕ್ಷೆಯೂ ಇರಲಿಲ್ಲ. ಈ ಕಾರ್ಯ ನನ್ನ ಹೃದಯವನ್ನೇ ಛೇದಿಸಿತು. ದೇವರು ಇಸ್ಮಾಯೇಲನನ್ನು ಕುರಿತು ಏನು ವಾಗ್ದಾನ **(ಆ.ಕಾ. 17:20)** ಮಾಡಿದರೋ, ಕಾರ್ಯಗಳು ಅದಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಿವೆ. ದೇವರು ನನ್ನೊಂದಿಗೆ ತಾವು ಕೊಟ್ಟ ಮಾತಿನಿಂದ ತಪ್ಪಿಸಿಕೊಳ್ಳುತಿದ್ದಾರೆಯೋ? ಈಗ ಇರುವ ಒಬ್ಬನೇ ಕಿರಿಮಗ ಇನ್ನೂ ವಿಳೆ ಪ್ರಾಯದವನಾಗಿರುವಾಗ, ಅವನಿಂದಲೂ ನನ್ನನ್ನು ದೂರಮಾಡುತ್ತಿದ್ದಾರೆಯೇ?

4. ಅಬ್ರಹಾಮನಿಗೆ 120 ವರುಷ ಶ್ರೀಮಂತ ಗೌರವಾನಿತ ಆತನ ಮುಂದಿನ ವಹಿವಾಟನ್ನು, ಮುಂದೆ ಆತನ ಮಗ ವಹಿಸಿಕೊಳ್ಳಬೇಕು. ಎಲ್ಲವೂ ಮೊದಲೇ ಯೋಜನೆ ಹಾಕಿಕೊಂಡಂತೆ ನಡೆಯುತ್ತಿತ್ತು. ಈಗ ದೇವರು ಏನು ಹೇಳುತ್ತಿದ್ದಾರೋ ಅದು ನಿಜವೇ?

(ಆ) **ಆದಿಕಾಂಡ 22:3-5**ನ್ನು ಓದಿಕೊಳ್ಳಿ. ಅಬ್ರಹಾಮ ಇಸಾಕನನ್ನು ಬಲಿಕೊಡಲು ಹೋಗುವ ಮುನ್ನ ಆತ ಸಾರಾಳಿಗೆ ಹೇಳಿಹೋದನೆಂದು ನೀವು ನೆನೆಸುತ್ತೀರಾ?

1) ಆತನ ಒಬ್ಬನೇ ಮಗನನ್ನು ಕೊಂದು, ಮನೆಗೆ ಹಿಂತಿರುಗಿದಾಗ ಆಕೆಗೆ ಏನು ಹೇಳುತ್ತಿದ್ದನು?

2) ಆಗಿಂದಾಗಲೇ ಈ ಕಾರ್ಯವನ್ನು ಮಾಡಲು ಅಬ್ರಹಾಮ ತ್ವರೆಪಟ್ಟದ್ದು ಏಕೆ?

3) ನಿಮ್ಮ ಒಬ್ಬನೇ ಮಗನನ್ನು ಕೊಲ್ಲುವ ಸಲುವಾಗಿ ನೀವು ಮಾಡುವ ಮೂರು ದಿನದ ಪ್ರಯಾಣದುದ್ದಕ್ಕೂ ಈ ಕಾರ್ಯವನ್ನು ಕುರಿತು ಚಿಂತಿಸುತ್ತಲೇ ಇರಬೇಕಾದ್ದನ್ನು ಕುರಿತು ನಿಮಗೆ ಏನನಿಸುತ್ತದೆ?

4) ಅಬ್ರಹಾಮನು ತನ್ನ ಸೇವಕರಿಗೆ, ‘‘ನಾನೂ ನನ್ನ ಮಗನೂ ಅಲ್ಲಿಗೆ ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ’’ ಎಂದು ಹೇಳಿದ್ದು ಏಕೆ?

(ಇ) **ಆದಿಕಾಂಡ 22:6-8**ನ್ನು ಓದಿಕೊಳ್ಳಿ. ಅಬ್ರಹಾಮನು, ಇಸಾಕನಿಗೆ ಏನು ಹೇಳಿದನೋ ಅದರಲ್ಲಿ ಆತನಿಗೆ ನಂಬಿಕೆ ಇತ್ತೇ? ಅಥವಾ, ತನ್ನ ಮಗನನ್ನು ಸಂತೈಸುವ ಸಲುವಾಗಿ ಅಬ್ರಹಾಮ ಹಾಗೆ ತನ್ನ ಮಗನಿಗೆ ಸುಳ್ಳು ಹೇಳಿದನೇ? **ಆದಿಕಾಂಡ 18:14**ನ್ನು ಓದಿಕೊಳ್ಳಿ. ಅಬ್ರಹಾಮನ ಮನಸ್ಸಿನಲ್ಲಿ ಒಂದು ಮಹಾಹೋರಾಟವೇ ನಡೆದಿತ್ತು ಎಂದು ನಾನು ನಂಬುತ್ತೇನೆ. ಕೊನೆಯ ತೀರ್ಮಾನವೇನೆಂದರೆ: ದೇವರು ಈ ಕೆಲಸವನ್ನು ನಡೆಯಿಸಿಕೊಡುತ್ತಾನೆ, ಆತನಿಗೆ ಅಸಾಧ್ಯವಾದದ್ದು ಒಂದೂ ಇಲ್ಲ.]

(ಈ) **ಆದಿಕಾಂಡ 2:910**ನ್ನು ಓದಿಕೊಳ್ಳಿ. ಒಂದು ಘಟ್ಟದಲ್ಲಿ ಅಬ್ರಹಾಮ ಇಸಾಕನಿಗೆ ದೇವರ ಸೂಚನೆಗಳನ್ನು ಖಂಡಿತ ಹೇಳಿರಲಿಕ್ಕೂ ಸಾಧ್ಯ. ಅಂಥಹ ಸಂದರ್ಭದಲ್ಲಿ ಇಸಾಕನ ಪ್ರತಿಕ್ರಿಯೆ – ಹೇಗಿದ್ದಿರಬಹುದು? [ಇಸಾಕ ಇದಕ್ಕೆ ಒಪ್ಪಿಕೊಂಡಿರಬಹುದು. ನಂಬಿಕೆಯಲ್ಲಿ ತಂದೆಯನ್ನು ಮೀರಿದ ಮಗನಿದ್ದಿರಬಹುದು. ದೇವರ ಧ್ವನಿ ನನ್ನ ಅಪ್ಪನಿಗೆ ಗೊತ್ತು ಎಂಬುದು ಇಸಾಕನ ನಂಬಿಕೆ. ಇಸಾಕ ತಂದೆಯಲ್ಲಿದ್ದ ದೇವರ ನಂಬಿಕೆಯೊಂದಿಗೆ ತಾನು ಒಂದಾದನು.]

(i) ದೇವರಿಗೆ ವಿಧೇಯನಾಗಿ ನಡೆಸುಕೊಳ್ಳಬೇಕು ಎಂಬ ಒಂದೇ ಒಂದು ತಾರ್ಕಿಕತೆಯನ್ನು ಬಿಟ್ಟು. ಎಲ್ಲ ತರ್ಕವನ್ನು ಉಲ್ಲಂಘಿಸುವ ಈ ಕಾರ್ಯಕ್ಕೆ ಅಬ್ರಹಾಮ ಮುಂದಾದನೇ?

(ii) ಒಂದಿನಿತು ತಾರ್ಕಿಕತೆಯಾದರೂ ಇಲ್ಲದೆಯೇ? ಇದು ದೇವರ ಮೇಲಿನ ಪರಿಶುದ್ಧ ಭಕ್ತಿಯೋ? [**ಇಬ್ರೀಯರು 11:17-19**ನ್ನು ಓದಿಕೊಳ್ಳಿರಿ. ತಾನಿದ್ದ ಪರಿಸ್ಥಿತಿಯಲ್ಲಿ ಅಬ್ರಹಾಮ ದೇವರ ವಾಗ್ದಾನದ ಸಂಧಾನದಲ್ಲಿರುವ ತರ್ಕವನ್ನು ಮೊದಲೇ ತನ್ನ ಮನಸ್ಸಿನಲ್ಲಿ ಲೆಕ್ಕಾಚಾರ ಹಾಕಿಲೊಂಡಿದ್ದನು.]

(ಉ) **ಆ.ಕಾ. 22:11-12**ನ್ನು ಓದಿಕೊಳ್ಳಿ. ನಂಬಿಕೆಯ ಮೇಲೆ ನಡೆಸಿದ ಬಹು ಕಠಿಣವಾದ ಪರೀಕ್ಷೆಯಲ್ಲಿ ಅಬ್ರಹಾಮ ಉತ್ತೀರ್ಣನಾಗಿದ್ದಾನೆ. ಆದಾಮ ಮತ್ತು ಹವ್ವಳು ಎಲ್ಲಿ ಸೋತರೋ, ಆ ಸ್ಥಳದಲ್ಲಿ ಅಬ್ರಹಾಮ ತನ್ನ ಪ್ರಾಮಾಣಿಕತೆಯಿಂದ ಗೆದ್ದಿದ್ದಾನೆ (ಇದು ಬಹುಶಃ ಆದಾಮ ಹವ್ವಳಿಗೆ ಇಟ್ಟಿದ್ದ ಪರೀಕ್ಷೆಗಿಂತಲೂ ತುಂಬಾ ಕಠಿಣವಾದ ಪರೀಕ್ಷೆಯನ್ನು ಕೊಡಲು ಕಾರಣವೇನು? ಈ ಪರೀಕ್ಷೆಯನ್ನು ದೇವರು ಸತ್ಯವೇದದಲ್ಲಿ ಉಲ್ಲೇಖಿಸಿರುವುದೇಕೆ? ಇಂಥಹ ಪರೀಕ್ಷೆಗಳು ಕೆಲವು ಜನರಿಗೆ ತಪ್ಪಾದ ಆಲೋಚನೆಗಳನ್ನು ಉಂಟು ಮಾಡಿರಲಿಕ್ಕೂ ಸಾಧ್ಯ. [ನಮಗೆ ಏನು ಮಾಡುತ್ತೇನೆ ಎಂದು ದೇವರು ವಾಗ್ದಾನ ಮಾಡಿದ್ದಾರೋ (ಆಯಾ ಕಾಲದಲ್ಲಿ) ಅದನ್ನು ಮಾನವರು ಅರಿಯಬೇಕೆಂಬುದೇ ದೇವರ ಆಲೊಚನೆಯಾಗಿತ್ತು. ತಮ್ಮ ಒಬ್ಬನೇ ಮಗನನ್ನು ತ್ಯಾಗಬಲಿಯಾಗಿ ಸಮರ್ಪಿಸುವ ದೇವರ ಅತಿಶಯವಾದ ವಾಗ್ದಾನವನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂಬುದೇ ಆತನ ಆಶಯವಾಗಿತ್ತು]

(ಊ) **ಆದಿಕಾಂಡ 22:13–14**ನ್ನು ಓದಿಕೊಳ್ಳಿ. ಆ.ಕಾ. 22:8ರಲ್ಲಿ ಅಬ್ರಹಾಮ, ಇಸಾಕನಿಗೆ, "ಮಗನೇ, ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು" ಎಂದು ಹೇಳುವಾಗ, ಸತ್ಯವನ್ನೇ ನುಡಿದನೇ ಎಂದು ನಾನು ನಿಮ್ಮನ್ನು ಕೇಳಿದ್ದನ್ನು ಜ್ಞಾಪಿಸಿಕೊಳ್ಳಿ? ದೇವರು ಕುರಿಯನ್ನು ಒದಗಿಸಿದನೇ? (ಹೌದು!).

(i) ಈ ಪೊದೆಯಲ್ಲಿ ಸಿಕ್ಕಿದ ಕುರಿಯನ್ನು ಯೇಸುಸ್ವಾಮಿಗೆ ಹೋಲಿಸುವದು ಹೇಗೆ? [ಯಾವ ರೀತಿಯಾಗಿ ಈ ಕುರಿ ಇಸಾಕನ ಸ್ಥಾನವನ್ನು ಅಲಂಕರಿಸಿ, ಆತನ ಜೀವವನ್ನು ಉಳಿಸಿ ಕೊಟ್ಟಿತೋ, ಅದೇ ರೀತಿಯಾಗಿ ಯೇಸುಸ್ವಾಮಿ ನಮ್ಮ ಮಕ್ಕಳ, ನಮ್ಮ ತಂದೆತಾಯಿಗಳ ಮತ್ತು ನಮ್ಮ ಸ್ಥಾನಗಳನ್ನಾಲಂಕರಿಸಿ, ನಿತ್ಯಮರಣದಿಂದ ನಮ್ಮನ್ನು ತಪ್ಪಿಸಿ ಕಾಪಾಡುತ್ತಾರೆ.]

(ಋ) ಯೇಸುಸ್ವಾಮಿ ನಮ್ಮ ಪಾಪಗಳಿಗಾಗಿ ಮರಣಿಸುವ ಯೋಜನೆಯನ್ನು ತಂದೆಯಾದ ದೇವರು ಮತ್ತು ಮಗನಾದ ದೇವರು ಹೇಗೆ ಒಪ್ಪಿಕೊಂಡರು ಎಂಬುದನ್ನು ವಿವರಿಸುವ ಯಾವ ದಾಖಲೆಗಳೂ ನಮ್ಮಲ್ಲಿಲ್ಲ. ಅಬ್ರಹಾಮ ಮತ್ತು ಇಸಾಕನ ಕಥೆಯಲ್ಲಿ ನಮಗೆ ಮೇಲೆ ಬೇಕಾಗಿದ್ದ ವಿವರಣೆಗೆ ಬೆಂಬಲ ಸಿಗುತ್ತದೆಯೇ?

i) ಅಬ್ರಹಾಮನ ಕಥೆಯಲ್ಲಿ, ಇಸಾಕನನ್ನು ಕೊಲ್ಲುವ ಸಂದರ್ಭದಲ್ಲಿ ಆತನ ಕೈಯನ್ನು ತಡೆಯಲು ದೇವರ ಹಸ್ತ ಮುಂದೆ ಬಂದಿತು, ಆದರೆ ನಮಗಾಗಿ ಯೇಸುಸ್ವಾಮಿ ಕೊಲ್ಲಲ್ಪಡುವಾಗ ದೇವರ ಹಸ್ತವನ್ನು ತಡೆಯಲು ಯಾರಾದರು ಇದ್ದರೆ? [ದೇವರು ಅಥವಾ ಯೇಸುಸ್ವಾಮಿ ಮಾತ್ರ ಆ ಕಾರ್ಯಮಾಡಬಲ್ಲರು.]

ii) **ಯೆಶಾಯ 52:14–15**ನ್ನು ಓದಿಕೊಳ್ಳಿರಿ. ಯೇಸುಸ್ವಾಮಿ ಅನುಭವಿಸಲಿರುವ ಹಿಂಸೆಗಳನ್ನು ಕುರಿತು ಪ್ರವಾದನೆಯಿದು. ಅಬ್ರಹಾಮ, ಇಸಾಕನನ್ನು ಕೊಲ್ಲುವ ಮುನ್ನ ಆತನನ್ನು ನೋಯಿಸಬೇಕಾಗಿತ್ತು. ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ಅಬ್ರಹಾಮ ಈ ಪರೀಕ್ಷೆಯನ್ನು ಅಷ್ಟು ಸುಲಭವಾಗಿ ಪಾಸುಮಾಡಿ ಬಿಡುತ್ತಿದ್ದ ಎಂದು ನಿಮಗನ್ನಿಸುತ್ತದೆಯೇ?

## III. ದೇವರ ಪಥದಲ್ಲಿ ಸಾಗೋಣ.

(ಅ) ನಂಬಿಕೆಯಿಂದ ರಕ್ಷಣೆ ಸಾಧಿಸುವ ದಾರಿಯಲ್ಲಿ ಕೈಗೊಳ್ಳಬೇಕಾದ ಕ್ರಿಯೆಗಳ ಮಹತ್ವನ್ನು ಕುರಿತು ಅಬ್ರಹಾಮ–ಇಸಾಕರ ಕಥೆ ನಮಗೆ ಬೋಧಿಸುವುದೇನು ? ಅಬ್ರಹಾಮ ಒಂದು ಸುಮಾರು ಇದನ್ನು ಮಾಡಲು ನಿರಾಕಸಿದ್ದಾರೆ ಏನಾಗುತ್ತಿತ್ತು? ಈ ಪರೀಕ್ಷೆ ವಿಫಲಗೊಳ್ಳುತ್ತಿತ್ತೇ ? [**ಯಾಕೋಬ 2:20–22**ನ್ನು **ರೋಮ 4:1–3** ನ್ನು ಹೋಲಿಸಿ ನೋಡಿರಿ.]

(ಆ) **ವಿ.ಕಾ. 32:31-32**ನ್ನು ಓದಿಕೊಳ್ಳಿರಿ. ಇಸ್ರಾಯೇಲ್ಯರು ಚಿನ್ನದ ಬಸವನ್ನು ಸೃಷ್ಟಿಸಿಕೊಂಡು, ಅದನ್ನೇ ಆರಾಧಿಸಲು ಪ್ರಾರಂಭಿಸಿದಾಗ, ದೇವರು ಮತ್ತು ಮೋಶೆಯ ನಡುವೆ ಸಂವಾದವಿದು. ಮೋಶೆಯು ಎಂಥಹ ಮನೋವೃತ್ತಿಯನ್ನು ಇಲ್ಲಿ ತೋರಿದ್ದಾನೆ? [ಆತ ಯೇಸುಸ್ವಾಮಿಯವರ ಗುಣಾತಿಶಗಳನ್ನು ಪ್ರತಿಬಿಂಬಿಸಿದ್ದಾನೆ. ತನ್ನ ಜೀವವನ್ನೇ ಇತರರಿಗಾಗಿ ಧಾರೆಯೆರೆಯಲು ಮುಂದೆ ಬಂದಿದ್ದಾನೆ.]

(ಇ) **ವಿ.ಕಾ. 32:33-34**ನ್ನು ಓದಿಕೊಳ್ಳಿರಿ. ಒಬ್ಬ ಮಾನವನ ಪಾಪಕ್ಕಾಗಿ ಇನ್ನೊಬ್ಬ ಮಾನವ ಮಡಿದು ದೋಷಪರಿಹಾರ ಮಾಡಬಲ್ಲನೇ? [ಇಲ್ಲ. ಆಗದು, ಮೊಶೆಯಂಥ ಮಹಾಶಯನಿಂದಲೂ ಅದು ಸಾಧ್ಯವಾಗದೆ ಹೋಯಿತು. ಯೇಸು-ಪರಿಪೂರ್ಣ ದೇವರು ಮತ್ತು ಪರಿಪೂರ್ಣ ಮನುಷ್ಯ. ಆತನು ಮಾತ್ರ ನಮ್ಮೆಲ್ಲರ ಪಾಪಗಳಿಗಾಗಿ ಬಲಿಪಶುವಾಗಬಹುದಾಗಿತ್ತು.]

(i) ಇತರರ ಪಾಪಗಳಿಗಾಗಿ ದೋಷಪರಿಹಾರ ನಮ್ಮಿಂದ ಮಾಡಲಾಗದಿದ್ದರೆ ನಾವು ಯೇಸುಸ್ವಾಮಿ ಮತ್ತು ಮೋಶೆಯ ಪಥದಲ್ಲಿ ಸಾಗುವುದು ಹೇಗೆ? [ನಾವು ಅವರಿಗೆ ಸ್ವ-ತ್ಯಾಗದ ಪ್ರೀತಿಯನ್ನು ತೋರಬಹುದು. ದೇವರು ನಮಗೇನು ಮಾಡಿದ್ದಾರೋ ಅದರ ಮೇಲಿನ ನಂಬಿಕೆ, ಇತರರಿಗಾಗಿ ನಾವು ಕೋರುವ ಸ್ವ-ತ್ಯಾಗದ ಪ್ರೀತಿಯಲ್ಲಿ ಪ್ರತಿಬಿಂಬಿಸಬೇಕು.]

(ಈ) ನನ್ನ ಸ್ನೇಹಿತನೇ, ಈ ಪ್ರಪಂಚದ ಸೃಷ್ಟಿಯ ಪೂರ್ವದಲ್ಲೇ ನಮ್ಮ ರಕ್ಷಣೆ ಯೋಜಿಸಲಾಯಿತು. ಮಾನವರು ಪಾಪಮಾಡಿದಾಗಲೇ ದೇವರು ತಮ್ಮ ಯೋಜನೆಯನ್ನು ಪ್ರಕಟಿಸಿದರು. ಆತನ ಯೋಜನೆಯನ್ನು ಕುರಿತ ಭಾವನೆಗಳನ್ನು ಅಬ್ರಹಾಮ ಮತ್ತು ಇಸಾಕನ ಕಥೆಯ ಘಟನಾವಳಿಗಳ ಮುಖಾಂತರ ದೇವರು ಪ್ರಕಟಪಡಿಸಿದ್ದಾರೆ. ಯೇಸುಸ್ವಾಮಿಯೇ ಮೆಸ್ಸೀಯನು ಎಂಬುದರಲ್ಲಿ ನಿನಗೇನಾದರೂ ಸಂದೇಹವಿದೆಯೇ? ದೇವರು ನಿನ್ನ ಮೇಲಿಟ್ಟಿರುವ ಅತಿಶಯವಾದ ಪ್ರೀತಿಯ ಮೇಲೂ ನಿನಗೆ ಸಂದೇಹವಿದಿಯೋ? ದೇವರು ನಿನ್ನನ್ನು ಎಷ್ಟರ ಮಟ್ಟಿಗೆ ಪ್ರೀತಿಸಿದ್ದಾರೆ! ಇಂದೇ ಆತನ ಸೇವಗಾಗಿ ನಿನ್ನ ಜೀವನವನ್ನು ಮುಡುಪಾಗಿಡಬಾರದೇಕೆ ?

**IV ) ಮುಂದಿನವಾರ : ದೋಷ ಪರಿಹಾರದ ಸಂಕೇತಗಳು : ಭಾಗ 1**